# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ
# ಅಫಜಲಪೂರ

**ಸಿ.ಸಿ. ನಂ.310/2019**

**ಕಲಬುರ್ಗಿ ವಿಭಾಗ ಅಬಕಾರಿ ಪೋಲಿಸ ಠಾಣೆ**

॥ ವಿರುದ್ಧ ॥

**ಶಂಕರ**

## ಃದೋಷಾರೋಪಣೆಃ

**ಶಂಕರ ತಂದೆ ರಾಮು ರಾಠೋಡ**
ವಯಸ್ಸುಃ 52-ವರ್ಷ, ಉಃ ಸಿಮೆಂಟ ಹಾಲೋಬ್ರಿಕ್ಸ್
ತಯಾರಿಸುವ ಘಟಕದ ಮಾಲೀಕ
ಸಾ॥ ಗೊಬೂರವಾಡಿ ತಾಂಡಾ, ತಾ॥ ಅಫಜಲಪುರ.
ಜಿಲ್ಲೆ ಕಲಬುರಗಿ.

ಆರೋಪಿಯಾದ ನಿನ್ನ ಮೇಲೆ...

ಶ್ರೀ ಅಶೋಕ ಟಿ., ಬಿ.ಎ., ಎಲ್ಎಲ್.ಬಿ., ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಅಫಜಲಪುರ. ಆರೋಪಿಸುವುದೇನೆಂದರೆ,

2019 ನೇ ಸಾಲಿನ ಲೋಕಸಭೆ ಸಾರ್ವತ್ರಿಕ ಚುನಾವಣೆ ನೀತಿ ಸಂಹಿತೆ ಜಾರಿಯಲ್ಲಿರುವಾಗ ದಿನಾಂಕ 21.04.2019 ರಂದು ಬೆಳಿಗ್ಗೆ 3.00 ಗಂಟೆಗೆ ಸಿಬ್ಬಂದಿಯವರೊಂದಿಗೆ ಅಕ್ರಮ ಚಟುವಟಿಕೆಗಳು ತಡೆಗಟ್ಟುವ ನಿಟ್ಟಿನಲ್ಲಿ ರಸ್ತೆ ಕಾವಲು ಮಾಡುತ್ತಿರುವಾಗ ಅಫಜಲಪೂರ ತಾಲ್ಲೂಕಿನ ಗೊಬೂರವಾಡಿ ತಾಂಡಾದ ವಡ್ಡಹಳ್ಳಿ ಕ್ರಾಸ ಹತ್ತಿರ ಆರೋಪಿಯಾದ ನಿನಗೆ ಸೇರಿದ ಸಿಮೆಂಟ ಹಾಲೋಬ್ರಿಕ್ಸ್ ತಯಾರಿಸುವ ಘಟಕದಲ್ಲಿ ನೀನು ಇಂಡಿಕಾ ವಿಸ್ಟಾ ಕಾರ ನಂ.ಕೆಎ-28/ಎಂ-7878 ನೇದ್ದರಲ್ಲಿ 90 ಎಂ.ಎಲ್ ಅಳತೆಯ192 ಪೆಟ್ ಒಟ್ಟು 17.280 ಲೀಟರ ಯು.ಎಸ್ ವಿಸ್ಕಿ ಬಾಟಲ್ಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಅಕ್ರಮವಾಗಿ ಸಾಗಾಣಿಕ ಮಾಡಿ ಆ ಮೂಲಕ **ಕರ್ನಾಟಕ ಅಬಕಾರಿ ಕಾಯ್ದೆ ಕಲಂಃ 32 ಮತ್ತು**

**34** ರಡಿಯಲ್ಲಿ ಗುನ್ಹಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀ.

ಅದೇ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತನು ತನ್ನಗೆ ಸೇರಿದ ಸಿಮೆಂಟ ಹಾಲೋಬ್ರಿಕ್ಸ್ ತಯಾರಿಸುವ ಘಟಕದಲ್ಲಿ ಇಂಡಿಕಾ ವಿಸ್ಟಾ ಕಾರ ನಂ.ಕೆಎ-28/ಎಂ-7878 ನೇದ್ದರಲ್ಲಿ 90 ಎಂ.ಎಲ್ ಅಳತೆಯ 192 ಪೆಟ್ ಒಟ್ಟು 17.280 ಲೀಟರ ಯು.ಎಸ್ ವಿಸ್ಕಿ ಬಾಟಲ್ಗಳನ್ನು ಸಂಗ್ರಹಿಸಲು ಅನುಮತಿ ಇಲ್ಲದೆ ಮತ್ತು ಕಾನೂನು ಬಾಹಿರವಾಗಿ ಸಂಗ್ರಹ ಮಾಡಿ, ಆ ಮೂಲಕ **ಕರ್ನಾಟಕ ಅಬಕಾರಿ ಕಾಯ್ದೆ ಕಲಂಃ 38(ಎ) ಮತ್ತು 43** ರಡಿಯಲ್ಲಿ ಗುನ್ಹಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀ.

ದಿನಾಂಕಃ 05.02.2020

ಜೆಎಮ್ಎಫ್‌ಸಿ, ಅಫಜಲಪೂರ

## ಆರೋಪಿಯ ಹೇಳಿಕೆ

ಪ್ರ-1 ಮೇಲೆ ಓದಿ ಹೇಳಲಾದ ಆರೋಪಣೆ ಅರ್ಥವಾಯಿತೆ?
ಉಃ

ಪ್ರ-2 ನಿನ್ನ ತಪ್ಪನ್ನು ಒಪ್ಪಿಕೊಳ್ಳುವಿಯಾ ಅಥವಾ ವಿಚಾರಣೆ ಬಯಸುತ್ತೀರಾ?
ಉಃ

ಈ ಮೂಲಕ ದೃಢೀಕರಿಸುವುದೇನೆಂದರೆ ಮೇಲೆ ಹೇಳಿದ ಆರೋಪಣೆಗಳನ್ನು ಆರೋಪಿತನಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿ ಆತನು ನೀಡಿದ ಉತ್ತರವನ್ನು ಯತಾಸ್ಥಿತಿಯಲ್ಲಿ ಬರೆದುಕೊಂಡಿದ್ದು ನಿಜವಿರುತ್ತದೆ

ದಿನಾಂಕಃ 05.02.2020

ಜೆ.ಎಮ್‌ಎಫ್‌ಸಿ, ಅಫಜಲಪೂರ